**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.**

**ಎಮ್ ವಿ ಸಿ ನಂಬರಃ 781/2021 ಮತ್ತು 782/2021**

ಆರ್ ಡಬ್ಲ್ಯೂ – 1

| | | |
|---|---|---|
| **ಸಾಕ್ಷಿದಾರರ ಹೆಸರು** | : | ಡಾ ಶೇಖ್ ಮೈನುದ್ದೀನ್ |
| **ತಂದೆ/ಗಂಡನ ಹೆಸರು** | : | ಕೆ ಎಮ್ ಜಲಾಲ್ |
| **ವಯಸ್ಸು** | : | 36 ವರ್ಷ |
| **ಉದ್ಯೋಗ** | : | ತುರ್ತು ಚಿಕಿತ್ಸಾ ವೈದ್ಯಾಧಿಕಾರಿ |
| **ವಾಸ** | : | ಹುಬ್ಬಳ್ಳಿ |

**ದಿನಾಂಕಃ 29–01–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎನ್ ಡಿ ವಕೀಲರಿಂದಃ**

ನಾನು ಜನೇವರಿ 2017 ರಿಂದ ಜನೇವರಿ 2023 ರವರೆಗೆ ತುರ್ತು ಚಿಕಿತ್ಸಾ ವೈದ್ಯಾಧಿಕಾರಿಯಾಗಿ ಮೆಗ್ಗಾನ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ನಾನು ಎಮ್ ಬಿ ಬಿ ಎಸ್ ಒದಿರುತ್ತೇನೆ. ನ್ಯಾಯಾಲಯದ ಸಮನ್ಸ ಮೇರೆಗೆ ನಾನು ಅರ್ಜಿದಾರ ಲಲಿತಮ್ಮ ಕೋಂ ಮಲ್ಲೇಶಪ್ಪ ರವರಿಗೆ ಸಂಬಂದಪಟ್ಟ ಎಕ್ಸರೆ ಮತ್ತು ಕೇಸ್ ಶೀಟನ್ನು ಹಾಜರುಪಡಿಸುತ್ತಿದ್ದೇನೆ. ಸದರಿಯವರಿಗೆ ಸಂಬಂದಪಟ್ಟ ಎಮ್ ಎಲ್ ಸಿ ಯು ಎಮ್ ವಿ ಸಿ ನಂ.779/2021 ರಲ್ಲಿ ಹಾಜರುಪಡಿಸಿದ ಎಮ್ ಎಲ್ ಸಿ ಯಲ್ಲಿ ಕಂಡು ಬಂದಿರುತ್ತದೆ ಎಂದು ನುಡಿಯುತ್ತಾರೆ. ಅರ್ಜಿದಾರರ ಒಳ ಮತ್ತು ಹೊರರೋಗಿ ರಜಿಸ್ಟರ್ ನ್ನು ತಾವು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯೂ 2019 ರಿಂದ ಡಿಜಿಟಲ್ ಆಗಿರುವುದರಿಂದ ಆ ರಿಜಿಸ್ಟರ್ ಗಳನ್ನು ಕಾಯ್ದಿರಿಸುವುದಿಲ್ಲ ಎಂದು ನುಡಿಯುತ್ತಾರೆ. ರೋಗಿಯ ಇತಿಹಾಸದ ಹಿನ್ನೆಲೆ ಹಾಗೂ ಚಿಕಿತ್ಸೆಯ ರಿಜಿಸ್ಟರ್ ಗಳು ಕೇಸ್ ಶೀಟ್ ಅಡಿಯಲ್ಲಿ ಬರುತ್ತದೆ. ಅರ್ಜಿದಾರ ಲಲಿತಮ್ಮ ಕೋಂ ಮಲ್ಲೇಶಪ್ಪ ರವರ patient progress sheet ನ್ನು ಹಾಜರುಪಡಿಸಿದ್ದೀರಾ ಎಂದರೆ ಒಳರೋಗಿಯಾದರೆ ಮಾತ್ರ ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ. ನರ್ಸ ಶೀಟ್ ಹಾಜರು ಮಾಡಿರುವುದಿಲ್ಲ. ಅರ್ಜಿದಾರರ Investigation report ಕೇಶ್ ಶೀಟ್ ನಲ್ಲಿ ಇರುತ್ತದೆ. ಎಕ್ಸರೆ 2019 ರಿಂದ ಡಿಜಿಟಲ್ ಆಗಿರುತ್ತದೆ. ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಮಾತ್ರ ಕೆಲಸ ಮಾಡುತ್ತೇನೆ. ರೋಗಿಯು ತುರ್ತು ಚಿಕಿತ್ಸಾ ವಿಭಾಗಕ್ಕೆ ಮೊದಲು ಬಂದಾಗ ಅವರಿಗೆ ಪ್ರಥಮ ಚಿಕಿತ್ಸೆ ಕೊಟ್ಟು ಅವರಿಗೆ ಮುಂದುವರೆದ ಚಿಕಿತ್ಸೆ ಅವಶ್ಯಕವಿದ್ದರೇ ಬೇರೆ ವಿಭಾಗಕ್ಕೆ ರೇಫರ್ ಮಾಡುತ್ತೇನೆ ಎಂದು ನುಡಿಯುತ್ತಾರೆ. ನುರಿತ ವೈದ್ಯರು ಅವರಿಗೆ ಚಿಕಿತ್ಸೆಯನ್ನು ಕೊಡುತ್ತಾರೆ. ಸದರಿ ವೈದ್ಯರೇ

ಆರ್ ಡಬ್ಲ್ಯೂ-1

ರೋಗಿಯ ಕೇಸ್ ಶೀಟ್ ನ್ನು ನೋಡಿಕೊಳ್ಳುತ್ತಾರೆ. ಯಾರು ಚಿಕಿತ್ಸೆ ಕೊಡುತ್ತಾರೆ, ಅವರೇ ಡಿಸ್ಚಾರ್ಜ ಸಮ್ಮರಿ ಕೊಡುತ್ತಾರೆ. ಅರ್ಜಿದಾರರಿಗೆ ನಾನು ಡಿಸ್ಚಾರ್ಜ ಸಮ್ಮರಿಯನ್ನು ಕೊಟ್ಟಿರುವುದಿಲ್ಲ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಡಿಸ್ಚಾರ್ಜ ಸಮ್ಮರಿಯಲ್ಲಿ ಮತ್ತುಕೇಸ್ ಶೀಟ್ ನಲ್ಲಿ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಗಳ ಸಹಿ ಇದ್ದು ಹೆಸರು ಇರುವುದಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಎಕ್ಸರೆ ವಿಭಾಗ ಪ್ರತ್ಯೇಕವಾಗಿರುತ್ತದೆ. ಎಕ್ಸರೆ ತೆಗೆದವರು ಎಕ್ಸರೆ ಮತ್ತು ರೋಗಿಗೆ ಆದ ಗಾಯದ ಬಗ್ಗೆ ಅಬಿಪ್ರಾಯವನ್ನು ಕೊಡುತ್ತಾರೆ. ಎಕ್ಸರೆ ವರದಿಗಳು ಜೆರಾಕ್ಸ ಪ್ರತಿಯಾಗಿರುತ್ತವೆ. ನ್ಯಾಯಾಲಯಕ್ಕೆ ಮೂಲ ಪ್ರತಿಗಳನ್ನು ತರಲು ತೊಂದರೆ ಇರಲಿಲ್ಲ.

ಕೇಸ್ ಶೀಟ್ ನ್ನು ನಿ ಆರ್ -1 ಎಂದು, ಎರಡು ಎಕ್ಸರೆಗಳನ್ನು ಒಟ್ಟಾಗಿ ನಿ ಆರ್ -2 ಎಂದು ಗುರುತಿಸಲಾಯಿತು. ನಿ ಆರ್ -2 ದಲ್ಲಿ ನನ್ನ ಸಹಿ ಇರುವುದಿಲ್ಲ.

**ಎಮ್ ವಿ ಸಿ ನಂ.782/2021**

ನಾನು ಅರ್ಜಿದಾರ ರಮೇಶ ತಂದೆ ಹಾಲಪ್ಪ ರವರಿಗೆ ಸಂಬಂದಪಟ್ಟ ಎಕ್ಸರೆ ಮತ್ತು ಕೇಸ್ ಶೀಟನ್ನು ಹಾಜರುಪಡಿಸುತ್ತಿದ್ದೇನೆ. ಸದರಿಯವರಿಗೆ ಸಂಬಂದಪಟ್ಟ ಎಮ್ ಎಲ್ ಸಿ ಯು ಎಮ್ ವಿ ಸಿ ನಂ.779/2021 ರಲ್ಲಿ ಹಾಜರುಪಡಿಸಿದ ಎಮ್ ಎಲ್ ಸಿ ಯಲ್ಲಿ ಕಂಡು ಬಂದಿರುತ್ತದೆ ಎಂದು ನುಡಿಯುತ್ತಾರೆ. ಅರ್ಜಿದಾರರ ಒಳ ಮತ್ತು ಹೊರರೋಗಿ ರಜಿಸ್ಟರ್ ನ್ನು ತಾವು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯೂ 2019 ರಿಂದ ಡಿಜಿಟಲ್ ಆಗಿರುವುದರಿಂದ ಆ ರಿಜಿಸ್ಟರ್ ಗಳನ್ನು ಕಾಯ್ದಿರಿಸುವುದಿಲ್ಲ ಎಂದು ನುಡಿಯುತ್ತಾರೆ. ರೋಗಿಯ ಇತಿಹಾಸದ ಹಿನ್ನೆಲೆ ಹಾಗೂ ಚಿಕಿತ್ಸೆಯ ರಿಜಿಸ್ಟರ್ ಗಳು ಕೇಸ್ ಶೀಟ್ ಅಡಿಯಲ್ಲಿ ಬರುತ್ತದೆ. ಅರ್ಜಿದಾರ patient progress sheet ನ್ನು ಹಾಜರುಪಡಿಸಿದ್ದೀರಾ ಎಂದರೆ ಒಳರೋಗಿಯಾದರೆ ಮಾತ್ರ ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ. ನರ್ಸ ಶೀಟ್ ಹಾಜರು ಮಾಡಿರುವುದಿಲ್ಲ. ಅರ್ಜಿದಾರರ Investigation report ಕೇಶ್ ಶೀಟ್ ನಲ್ಲಿ ಇರುತ್ತದೆ. ಎಕ್ಸರೆ 2019 ರಿಂದ ಡಿಜಿಟಲ್ ಆಗಿರುತ್ತದೆ. ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಮಾತ್ರ ಕೆಲಸ ಮಾಡುತ್ತೇನೆ. ರೋಗಿಯು ತುರ್ತು ಚಿಕಿತ್ಸಾ ವಿಭಾಗಕ್ಕೆ ಮೊದಲು ಬಂದಾಗ ಅವರಿಗೆ ಪ್ರಥಮ ಚಿಕಿತ್ಸೆ ಕೊಟ್ಟು ಅವರಿಗೆ ಮುಂದುವರೆದ ಚಿಕಿತ್ಸೆ ಅವಶ್ಯಕವಿದ್ದರೇ ಬೇರೆ ವಿಭಾಗಕ್ಕೆ ರೇಫರ್ ಮಾಡುತ್ತೇನೆ ಎಂದು ನುಡಿಯುತ್ತಾರೆ. ನುರಿತ ವೈದ್ಯರು ಅವರಿಗೆ ಚಿಕಿತ್ಸೆಯನ್ನು ಕೊಡುತ್ತಾರೆ. ಸದರಿ ವೈದ್ಯರೇ ರೋಗಿಯ ಕೇಸ್ ಶೀಟ್ ನ್ನು ನೋಡಿಕೊಳ್ಳುತ್ತಾರೆ. ಯಾರು ಚಿಕಿತ್ಸೆ ಕೊಡುತ್ತಾರೆ, ಅವರೇ ಡಿಸ್ಚಾರ್ಜ ಸಮ್ಮರಿ ಕೊಡುತ್ತಾರೆ. ಅರ್ಜಿದಾರರಿಗೆ ನಾನು ಡಿಸ್ಚಾರ್ಜ ಸಮ್ಮರಿಯನ್ನು ಕೊಟ್ಟಿರುವುದಿಲ್ಲ ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ. ಡಿಸ್ಚಾರ್ಜ ಸಮ್ಮರಿಯಲ್ಲಿ ಮತ್ತು

ಆರ್ ಡಬ್ಲ್ಯೂ-1

ಕೇಸ್ ಶೀಟ್ ನಲ್ಲಿ ಚಿಕಿತ್ಸೆ ನೀಡಿದ ವೈದ್ಯಾಧಿಕಾರಿಗಳ ಸಹಿ ಇದ್ದು ಹೆಸರು ಇರುವುದಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಎಕ್ಸರೆ ವಿಭಾಗ ಪ್ರತ್ಯೇಕವಾಗಿರುತ್ತದೆ. ಎಕ್ಸರೆ ತೆಗೆದವರು ಎಕ್ಸರೆ ಮತ್ತು ರೋಗಿಗೆ ಆದ ಗಾಯದ ಬಗ್ಗೆ ಅಬಿಪ್ರಾಯವನ್ನು ಕೊಡುತ್ತಾರೆ. ಎಕ್ಸರೆ ವರದಿಗಳು ಜೆರಾಕ್ಸ ಪ್ರತಿಯಾಗಿರುತ್ತವೆ. ನ್ಯಾಯಾಲಯಕ್ಕೆ ಮೂಲ ಪ್ರತಿಗಳನ್ನು ತರಲು ತೊಂದರೆ ಇರಲಿಲ್ಲ.

ಕೇಸ್ ಶೀಟ್ ನ್ನು ನಿ ಆರ್ -3 ಎಂದು, ಎರಡು ಎಕ್ಸರೆಗಳನ್ನು ಒಟ್ಟಾಗಿ ನಿ ಆರ್ -4 ಎಂದು ಗುರುತಿಸಲಾಯಿತು. ನಿ ಆರ್ -4 ದಲ್ಲಿ ನನ್ನ ಸಹಿ ಇರುವುದಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಮ್ ಎಸ್ ಎ ವಕೀಲರಿಂದಃ**

ಕೇಸ್ ಶೀಟ್ ನಲ್ಲಿ ನರ್ಸ ಶೀಟ್ ಇದೆ ಎಂದರೆ ನೋಟ್ಸ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಅರ್ಜಿದಾರರ ಗಾಯದ ಪ್ರಮಾಣ ಪತ್ರಗಳನ್ನು ನಾನೇ ನೀಡಿದ್ದು ಅವುಗಳಿಗೆ ನಾನೇ ಸಹಿ ಹಾಕಿರುತ್ತೇನೆ ಎಂದರೆ ಸರಿ. ಅರ್ಜಿದಾರರು ಒಳರೋಗಿಯಾಗಿ ಎನು ಚಿಕಿತ್ಸೆ ಪಡೆದಿದ್ದಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಕೇಶ್ ಶೀಟ್ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಡಿಸ್ಚಾರ್ಜ ಸಮ್ಮರಿಯನ್ನು ನೋಡಿ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.